ಕರ್ನಾಟಕ ಸರ್ಕಾರ

(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ ಃಃ 92/2011**

ಪ್ರಾಸಾ- 20 ಚಾಸಾ- 28

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಸಂಜಯ್ |
| ತಂದೆಯ ಹೆಸರುಃ | ಃ | ಹೆಚ್.ಎಸ್.ರವಿಕುಮಾರ್ |
| ವಯಸ್ಸುಃ | ಃ | 57 ವರ್ಷ |
| ಉದ್ಯೋಗಃ | ಃ | ಪಾಲುದಾರರು,<br>ಶ್ರೀ ವೆಂಕಟೇಶ್ವರ ಸೇಲ್ಸ್ ಅಂಡ್ ಸರ್ವೀಸಸ್ |
| ವಾಸಃ | ಃ | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 22-02-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಹಾಸನದಲ್ಲಿರುವ ಶ್ರೀ ವೆಂಕಟೇಶ್ವರ ಸೇಲ್ಸ್ ಅಂಡ್ ಸರ್ವೀಸಸ್ ಸಂಸ್ಥೆಯಲ್ಲಿ ಪಾಲುದಾರನಾಗಿದ್ದು ಸದರಿ ಸಂಸ್ಥೆಯಲ್ಲಿ ಹೀರೋಹೋಂಡಾ ದ್ವಿಚಕ್ರವಾಹನಗಳ ಮಾರಾಟ ಮತ್ತು ರಿಪೇರಿ ಕೆಲಸವನ್ನು ಮಾಡುತ್ತೇವೆ. ರಂಗಸ್ವಾಮಿಯವರು ನಮ್ಮ ಸಂಸ್ಥೆಯಿಂದ 2001 ರಲ್ಲಿ ಹೀರೋಹೋಂಡಾ ಪ್ಯಾಷನ್ ದ್ವಿಚಕ್ರವಾಹನವನ್ನು ಖರೀದಿ ಮಾಡಿದ್ದರು. ಆ ಸಮಯದಲ್ಲಿ ಸದರಿ ವಾಹನದ ಬೆಲೆ ರೂ.45,170/- ಆಗಿತ್ತು. ಈ ಮೇಲೆ ಹೇಳಿದಂತೆ ರಂಗಸ್ವಾಮಿಯವರು ನಮ್ಮ ಸಂಸ್ಥೆಯಿಂದ ದ್ವಿಚಕ್ರ ವಾಹನ ಖರೀದಿ ಮಾಡಿದ ಬಗ್ಗೆ ಹಾಸನ ಲೋಕಾಯುಕ್ತ ಪೊಲೀಸರು ಮಾಹಿತಿ ಕೇಳಿದ್ದರು. ಆ ಬಗ್ಗೆ ನಾನು ಲೋಕಾಯುಕ್ತ ಪೊಲೀಸರಿಗೆ ಇನ್ವಾಯ್ಸ್ ದಾಖಲೆಯನ್ನು ನೀಡಿರುತ್ತೇನೆ. ಸದರಿ ದಾಖಲೆಯನ್ನು ಈಗ ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ದಾಖಲೆಯು ನಾನು ಲೋಕಾಯುಕ್ತ ಪೊಲೀಸರಿಗೆ ನೀಡಿರುವ ಇನ್ವಾಯ್ಸ್ ದಾಖಲೆಯಾಗಿರುತ್ತದೆ.

ಸದರಿ ದಾಖಲೆಯನ್ನು ಲೋಕಾಯುಕ್ತ ಪೊಲೀಸರ ಮುಂದೆ ಹಾಜರುಪಡಿಸಿದ ಬಗ್ಗೆ ನಾನು ಪತ್ರ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆ ಸದರಿ ಪತ್ರವಾಗಿರುತ್ತದೆ. ಅದನ್ನು ನಿಶಾನೆ ಪಿ.56 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ56(ಎ) ಎಂದು ಗುರುತಿಸಲಾಗಿದೆ. ಈಗ ತೋರಿಸಿದ ದಾಖಲೆಯು ಲೋಕಾಯುಕ್ತ ಪೊಲೀಸರಿಗೆ ನೀಡಿರುವ ಇನ್ವಾಯ್ಸ್ ದಾಖಲೆಯಾಗಿದ್ದು ಅದನ್ನು ನಿಶಾನೆ ಪಿ.57 ಎಂದು ಗುರುತಿಸಲಾಗಿದೆ. ಸದರಿ ದಾಖಲೆಗೆ ನಮ್ಮ ಮ್ಯಾನೇಜರ್ ರವರ ಸಹಿ ಇರುತ್ತದೆ. ಈ ಕೇಸಿಗೆ ಸಂಬಂಧಪಟ್ಟಂತೆ ನಾನು ಲೋಕಾಯುಕ್ತ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಬಿ.ಜೆ.ಪಿ.ಎಸ್. ವಕೀಲರಿಂದಃ-**

ನಮ್ಮ ಸಂಸ್ಥೆಯಲ್ಲಿರುವ ದಾಖಲೆಗಳ ಆಧಾರದಲ್ಲಿ ನಾನು ಲೋಕಾಯುಕ್ತ ಪೊಲೀಸರಿಗೆ ಸಂಬಂಧಪಟ್ಟ ಇನ್ವಾಯ್ಸ್ ದಾಖಲೆಗಳನ್ನು ನೀಡಿರುತ್ತೇನೆ. ರಂಗಸ್ವಾಮಿಯವರು ದ್ವಿಚಕ್ರ ವಾಹನವನ್ನು ಖರೀದಿಸಿರುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಈ ಮೇಲೆ ಹೇಳಿರುವ ದ್ವಿಚಕ್ರ ವಾಹನವನ್ನು ನಗದು ಹಣ ನೀಡಿ ರಂಗಸ್ವಾಮಿಯವರು ಖರೀದಿ ಮಾಡಿದ್ದರು.

**ಮರು ವಿಚಾರಣೆಃ** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**